# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಜಿ.ಎಲ್.ಬಿ–2685/2016/ಡಿಆರ್‌ಇ–5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು–560 001,
ದಿನಾಂಕ:10.4.2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಶ್ರೀ.ಮಹಮ್ಮದರಫೀಕ್ ತಂದೆ ಅಲ್ಲಾಭಕ್ಷ, ವಾರ್ಡ್ ಸಂಖ್ಯೆ: 04, ಮಲ್ಲುರ್ ಮಸೀಧಿ ಹತ್ತಿರ, ಟಿಪ್ಪು ಸುಲ್ತಾನ್ ಸರ್ಕಲ್ ಹತ್ತಿರ ಸಿರಗುಪ್ಪೆ ತಾಲ್ಲೂಕು ಬಳ್ಳಾರಿ ಜಿಲ್ಲೆ ಅವರು ಸಲ್ಲಿಸಿದ ದೂರಿನ ಕುರಿತು.

****

ಶ್ರೀ.ಮಹಮ್ಮದರಫೀಕ್ ತಂದೆ ಅಲ್ಲಾಭಕ್ಷ, ವಾರ್ಡ್ ಸಂಖ್ಯೆ: 04, ಮಲ್ಲುರ್ ಮಸೀಧಿ ಹತ್ತಿರ, ಟಿಪ್ಪು ಸುಲ್ತಾನ್ ಸರ್ಕಲ್ ಹತ್ತಿರ ಸಿರಗುಪ್ಪೆ ತಾಲ್ಲೂಕು ಬಳ್ಳಾರಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ), ಇವರು (1) ಶ್ರೀ.ಮರಿಲಿಂಗಪ್ಪ, ಪೌರಾಯುಕ್ತರು, ನಗರ ಸಭೆ, ಸಿರುಗುಪ್ಪ, ಬಳ್ಳಾರಿ ಜಿಲ್ಲೆ (2) ಶ್ರೀ.ಎಂ.ಗಂಗಾಧರ ಗೌಡ, ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಕಾರ್ಯಾಲಯ, ಸಿರುಗುಪ್ಪ, ಬಳ್ಳಾರಿ ಜಿಲ್ಲೆ ಮತ್ತು (3) ಶ್ರೀ.ಹೆಚ್.ಎಂ.ಖಾಸಿಂ, ನೈರ್ಮಲ್ಯ ಮೇಸ್ತ್ರಿ, ನಗರ ಸಭೆ, ಸಿರಗುಪ್ಪೆ, ಬಳ್ಳಾರಿ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. ದೂರುದಾರರು ತಮ್ಮ ದೂರಿನಲ್ಲಿ, ಶಿರಗುಪ್ಪ ನಗರ ಸಭಾ ವ್ಯಾಪ್ತಿಯಲ್ಲಿ ಬರುವ ಸ. ನಂ: 680 ಮತ್ತು 780 ರಲ್ಲಿ ಬರುವ ರಾಜಕಾಲುವೆ ಮೇಲೆ ಒತ್ತುವರಿ ಮಾಡಿ ಅನಧಿಕೃತವಾಗಿ ಮತ್ತು ಕಾನೂನು ಬಾಹೀರವಾಗಿ ನಗರ ಸಭೆ ಪರವಾನಗಿ ಇಲ್ಲದೆ 8 ಮನೆಗಳನ್ನು ಅಬ್ದುಲ್ ಗನಿ ಮತ್ತು ಶಮಿನ್ ರವರು ಕಟ್ಟುತ್ತಿದ್ದಾರೆ. ಕಟ್ಟಡ ನಿರ್ಮಾಣದ ಬಗ್ಗೆ ತಕರಾರು ಸಲ್ಲಿಸಿದರೂ ಸಹ ಯಾವುದೇ ಪ್ರಯೋಜನವಾಗಿಲ್ಲ ಎದುರುದಾರರು

ಕೇವಲ ತೋರಿಕೆಗೆ ನೋಟೀಸು ಜಾರಿ ಮಾಡಿ ಸುಮ್ಮನೆ ಇದ್ದಾರೆ ಮೊದಲನೇ ಹಂತ, 2ನೇ ಹಂತ ಮತ್ತು 3ನೇ ಹಂತದಲ್ಲಿ ಗಮನಕ್ಕೆ ತಂದರೂ ಸಹ ಕೇವಲ ನೋಟೀಸುಗಳನ್ನು ಕೊಟ್ಟಿದ್ದಾರೆ. ಸಾರ್ವಜನಿಕ ಹಿತದೃಷ್ಠಿಯಿಂದ ರಾಜಕಾಲುವೆ ಉಳಿಸಲು ಮುಂದಿನ ದಿನಗಳಲ್ಲಿ ಮಳೆಯ ಪ್ರವಾಹ ಬಂದರೆ ರಾಜಕಾಲುವೆ ಮುಖಾಂತರ ಹರಿಯಲು ಒತ್ತುವರಿಯನ್ನು ತೆರವುಗೊಳಿಸಲು ಕೋರಿಕೊಳ್ಳಲಾಗಿದೆ. ಆದರೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅಂತ ದೂರು ಸಲ್ಲಿಸಿದ್ದಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 3 ಸಲ ಇ.ಜಿ.ಅಬ್ದುಲ್ ಗನಿ ಮತ್ತು ಪಿ.ಜಿ.ಶಮೀನ್ ಇವರಿಗೆ ನೋಟೀಸುಗಳನ್ನು ಕೊಟ್ಟು ಕಟ್ಟಡ ನಿರ್ಮಾಣ ನಿಲ್ಲಿಸುವಂತೆ ಮತ್ತು ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಅವರು ಸ. ನಂ: 780/2 ಮತ್ತು 680/2ರಲ್ಲಿ ಇರುವ ವ್ಯವಸಾಯದ ಜಮೀನಿನಲ್ಲಿ ಮನೆ ಕಟ್ಟಿಸುತ್ತಿದ್ದರು ಇವು ಖಾಸಗಿ ಆಸ್ತಿಗಳಾಗಿದೆ. ನಮ್ಮ ಜಮೀನು ಎನ್.ಎ. ಮಾಡಿಸಿಕೊಂಡಿಲ್ಲ. ಈಗಾಗಲೇ ಸಾಕಷ್ಟು ಜನರು 25 -30 ವರ್ಷಗಳಿಂದ ಶೆಡ್ ಮತ್ತು ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದು ತಿಳಿಸಿದ್ಧಾರೆ. ಇ.ಜಿ.ಅಬ್ದುಲ್ ಗನಿ ರವರು ಸ್ವಂತ ಜಮೀನಿನಲ್ಲಿ ಕಟ್ಟಡ ನಿರ್ಮಿಸುತ್ತಿರುವುದರಿಂದ ದೂರುದಾರರು ಸಹ ಒಂದು ಮನೆ ನಿರ್ಮಿಸಲು ಮುಂದಾಗಿದ್ದರೂ ದೂರುದಾರ ನಿರುದ್ಯೋಗಿಯಾಗಿದ್ದು ಹಣ ಕೇಳುವ ಪ್ರವೃತ್ತಿಯವರಾಗಿದ್ದಾರೆ. ಆದ್ದರಿಂದ ದೂರನ್ನು ಮುಕ್ತಾಯಗೊಳಿಸಲು ಕೋರಿದ್ದಾರೆ. ಇದೇ ರೀತಿಯಾಗಿ 2 ಮತ್ತು 3ನೇ ಎದುರುದಾರರು ಸಹ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ದೂರುದಾರರು ಸದರಿ ಇ.ಜಿ.ಅಬ್ದುಲ್ ಗನಿ ಮತ್ತು ಪಿ.ಜಿ.ಶಮೀನ್ ಇವರಿಂದ 50000/- ರೂಗಳನ್ನು ಕೇಳುತ್ತಿದ್ದಾರೆ. ಆದ್ದರಿಂದ ದೂರನ್ನು ಮುಕ್ತಾಯಗೊಳಿಸಲು ಕೋರಿದ್ದಾರೆ.

4. ಈ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ ಅವರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಇ.ಜಿ.ಅಬ್ದುಲ್ ಗನಿ ಮತ್ತು ಪಿ.ಜಿ.ಶಮೀನ್ ಎನ್ನುವವರು 8 ಕೋಣೆಗಳ ಟಿನ್ ಶೇಡ್ ಮನೆಗಳನ್ನು ಕಟ್ಟಿಕೊಳ್ಳುತ್ತಿರುವ ವಿಷಯ ವಿವಾಧದಲ್ಲಿ ಇಲ್ಲ ಇವುಗಳನ್ನೆಲ್ಲಾ ತಮ್ಮ ಸ್ವಂತ ವ್ಯವಸಾಯದ ಜಮೀನಿನಲ್ಲಿ

../2

ಸದರಿಯವರು ಕಟ್ಟಿಕೊಳ್ಳುತ್ತಿದ್ದಾರೆ ಅಂತ ಎದುರುದಾರರು ಹೇಳುತ್ತಾರೆ. ಈ ಜಮೀನುಗಳು ಅನ್ಯಸಂಕ್ರಾಂತವಾಗಿಲ್ಲ ಅಂತ ಸಹ ಎದುರುದಾರರು ಒಪ್ಪಿಕೊಳ್ಳುತ್ತಾರೆ. ಈ 2 ಜಮೀನುಗಳು ಶಿರಗುಪ್ಪಾ ನಗರಸಭೆ ವ್ಯಾಪ್ತಿಯಲ್ಲಿ ಬರುತ್ತದೆ. ಎನ್ನುವುದನ್ನು ಸಹ ವಿವಾಧಿಸಿಲ್ಲ. ಸದರಿ ಇ.ಜಿ.ಅಬ್ದುಲ್ ಗನಿ ಮತ್ತು ಪಿ.ಜಿ.ಶಮೀನ್ ಇವರು ಕಟ್ಟಡ ಕಟ್ಟಲು ಪರವಾನಗಿ ತೆಗೆದುಕೊಂಡಿಲ್ಲ ಎನ್ನುವುದನ್ನು ಸಹ ಮನಗೊಂಡು ಅವರಿಗೆ 3 ನೋಟೀಸುಗಳನ್ನು ಕೊಟ್ಟಿದ್ದಾರೆ. ಆದರೆ ಕರ್ನಾಟಕ ಮುನಿಸಿಪಾಲಿಟಿ ಕಾಯಿದೆಯಂತೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. 3 ಜನ ಎದುರುದಾರರು ಯಾವುದೇ ಕಾನೂನು ಕ್ರಮ ತೆಗೆದುಕೊಳ್ಳದೆ ಕರ್ತವ್ಯಲೋಪವನ್ನು ಎಸಗಿದ್ದಾರೆ. ಕಟ್ಟಡ ಕಟ್ಟುವಿಕೆಯ 3 ಹಂತದಲ್ಲಿ ದೂರುದಾರರು ದೂರನ್ನು ಸಲ್ಲಿಸಿದ್ದಾರೆ. ಆದರೆ ಎದುರುದಾರರು ಕೇವಲ ನೋಟೀಸುಗಳನ್ನು ಕೊಟ್ಟು ಅಕ್ರಮ ಕಟ್ಟಡ ತಲೆ ಎತ್ತಲು ಸಹಕಾರಕೊಟ್ಟು ಕರ್ತವ್ಯಲೋಪವೆಸಗಿದ್ದಾರೆ ಹಾಗೂ ಕಾನೂನು ಬಾಹೀರವಾಗಿ ನಿರ್ಮಾಣವಾದ ಕಟ್ಟಡ ತೆರವುಗೊಳಿಸಿ ಸೂಕ್ತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರಿಗೆ ನಿರ್ದೇಶನ ನೀಡಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- .11/1/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.



93